**‘ಸೋಪಿಲ್ಲದೆ ಸೌಂದರ್ಯವೆ?’ ಎನ್ನುವುದು ನಾಗರಿಕ ಜಗತ್ತಿನ ಅಘೋಷಿತ ಧ್ಯೇಯವಾಕ್ಯ. ಜಗತ್ತಿನ ಚೆಲುವಿನ ರಾಯಭಾರಿಗಳಂತೆ ಕಾಣಿಸುವ ಸೋಪುಗಳು, ಬಗೆ ಬಗೆಯ ಬಣ್ಣ ಗಂಧಗಳಿಂದ ಬಳಕೆದಾರರನ್ನು ಮರುಳು ಮಾಡುತ್ತಿವೆ. ಈ ಸೋಪುಲೋಕದ ಬೆಳವಣಿಗೆಯ ಕಥನ ನಮ್ಮ ಸೌಂದರ್ಯಪ್ರಜ್ಞೆಯ ವಿಕಾಸದಂತೆಯೂ ಕಾಣಿಸುತ್ತದೆ.**



‘ಭಾರತ ಬೆಳಗುತ್ತಿದೆ – ಬೆಳೆಯುತ್ತಿದೆ ಸಾಬೂನಿನಿಂದ’ ಎಂದರೆ ಸದ್ಯದ ಮಾರುಕಟ್ಟೆ ಪರಿಸ್ಥಿತಿಯಲ್ಲಿ ಉತ್ಪ್ರೇಕ್ಷೆ ಆಗಲಾರದೇನೊ. ಇಂದು ಸೋಪ್ ಎಂಬ ಹೆಸರಿನಿಂದ ಶಿಷ್ಟವಾಗಿರುವ ಸಾಬೂನು ಈ ಹಂತ ತಲುಪುವವರೆಗಿನ ಪಯಣ ಅದರ ಬಣ್ಣ ಗಂಧಗಳಷ್ಟೇ ರಂಜಿತ.

ಬ್ರಿಟಿಷ್ ಆಡಳಿತದಲ್ಲಿ ಆಧುನಿಕ ಸಾಬೂನುಗಳನ್ನು ಭಾರತಕ್ಕೆ ಆಮದು ಮಾಡಿಕೊಂಡು ತಂದವರು ಲಿವರ್ ಸಹೋದರರು. 1897ರ ಹೊತ್ತಿಗೆ ಮೀರತ್‌ನಲ್ಲಿ ಮೊದಲ ಸಾಬೂನು ತಯಾರಿಕಾ ಘಟಕ ಆರಂಭವಾಗಿತ್ತು. 1918ರಲ್ಲಿ ಜಮ್ಷೆಡ್ ಜಿ ಟಾಟಾ ಅವರು ಮೊದಲ ಭಾರತೀಯ ಒಡೆತನದ ಸಾಬೂನು ಕಂಪನಿ ಆರಂಭಿಸಿದರು. ಕೇರಳದ ಕೊಚ್ಚಿಯ ಕೊಬ್ಬರಿ ಎಣ್ಣೆಯ ಮಿಲ್ಲುಗಳನ್ನು ಖರೀದಿಸಿದ ಅವರು, ಮೊದಲಿಗೆ ಅಡುಗೆ ಎಣ್ಣೆ ಹಾಗೂ ಬಟ್ಟೆ ಸಾಬೂನುಗಳನ್ನು ತಯಾರಿಸಿದರು. ನಂತರ ಆ ಕಂಪನಿಗೆ ‘ಟಾಟಾ ಆಯಿಲ್ ಮಿಲ್’ ಆಗಿ ಮರು ನಾಮಕರಣ ಮಾಡಲಾಯಿತು. 1930ರಲ್ಲಿ ಅವರಿಂದ ಬ್ರ್ಯಾಂಡೆಡ್ ಸಾಬೂನುಗಳು ಬಿಡುಗಡೆಯಾದವು. ಮುಂದಿನ ಏಳೇ ವರ್ಷಗಳಲ್ಲಿ, ಅಂದರೆ 1937ರ ಹೊತ್ತಿಗೆ ಮೇಲ್ವರ್ಗದ ಜನರಿಗೆ ಸ್ನಾನದ ಸಾಬೂನುಗಳು ಅನಿವಾರ್ಯವಾದವು. ಆದರೆ ಗ್ರಾಮೀಣ ಭಾರತ, ಮಧ್ಯಮವರ್ಗದವರೇ ಹೆಚ್ಚಾಗಿದ್ದ ಭಾರತದ ಭಾಗಗಳಲ್ಲಿ, ಸ್ವಾತಂತ್ರ್ಯಾನಂತರದ ಅನೇಕ ದಶಕಗಳವರೆಗೂ ಅಡವಿಯ ಉಪ ಉತ್ಪನ್ನಗಳಾದ ಶೀಗೆಕಾಯಿ, ಅಂಟುವಾಳ ಕಾಯಿಗಳೇ ಸಾಬೂನಿನಂತೆ ಬಳಕೆಯಲ್ಲಿದ್ದವು.

ಇಂದು ಭಾರತದಲ್ಲಿ ಗೊದ್ರೆಜ್, ಹಿಂದುಸ್ತಾನ್ ಯುನಿಲಿವರ್, ಐಟಿಸಿ, ಹಿಮಾಲಯನ್ ಡ್ರಗ್ ಕಂಪನಿ, ವಿಪ್ರೊ ಮೊದಲಾದ ಹತ್ತಾರು ಮುಂಚೂಣಿ ಕಂಪನಿಗಳ ಜೊತೆಗೆ ಕೆಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳ ಸಾಬೂನು ತಯಾರಿಕೆಯ ಬೃಹತ್ ಕಂಪನಿಗಳಿವೆ, ನೂರಾರು ಸಣ್ಣ ಪ್ರಮಾಣದ ಘಟಕಗಳೂ ಇವೆ. ಇವುಗಳಲ್ಲಿ ಹೆಚ್ಚಿನವು ಗೃಹೋದ್ಯಮಗಳು. ಲೈಫ್‌ಬಾಯ್, ಲಿರಿಲ್, ಲಕ್ಸ್, ಸಿಂಥಾಲ್, ರೆಕ್ಸೊನಾ, ನಿರ್ಮಾ, ಗೋದ್ರೆಜ್, ಪತಂಜಲಿ ಮೊದಲಾದ ಪ್ರಮುಖ ಬ್ರ್ಯಾಂಡ್‌ಗಳ ಬಗೆಬಗೆಯ ಸಾಬೂನುಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯ.

‘ಸೋಪ್’ ಎಂಬ ಸಾಬೂನಿನ ಕಥೆ ಬಹಳ ಆಸಕ್ತಿದಾಯಕವಾದುದು. ಸೋಪ್ – ಈ ಶಬ್ದ ಲ್ಯಾಟಿನ್ ಪದ ‘ಸಾಪೊ’ದಿಂದ ಬಂದಿದೆ. ಇದನ್ನು ಮೌಂಟ್ ಸಾಪೋದಿಂದ ಹೆಸರಿಸಲಾಗಿದೆ.

ಸಾಬೂನನ್ನು ಹೋಲುವ ವಸ್ತು ಸುಮಾರು ಕ್ರಿ.ಪೂ. 2800ರಲ್ಲಿ ಬಳಕೆಗೆ ಬಂತು. ಮೊದಲು ಬ್ಯಾಬಿಲೋನೀಯರು, ಈಜಿಪ್ಷಿಯನ್ನರು, ಮೆಸಪೊಟೊಮೀಯನ್ನರು ಹಾಗೂ ಗ್ರೀಕರು ಇದನ್ನು ತಯಾರಿಸುತ್ತಿದ್ದರು. ಮಧ್ಯಪ್ರಾಚ್ಯದಲ್ಲಿ 12, 13ನೇ ಶತಮಾನದಲ್ಲಿ ಸಾಬೂನು ಬೆಳಕಿಗೆ ಬಂತು. ಆ ಸಂದರ್ಭದಲ್ಲಿ ಸಾಬೂನಿಗೆ ಬೇಕಾಗುವ ಅಲ್ಕಲೈ ಅನ್ನು ಸಸ್ಯ, ಕಟ್ಟಿಗೆಯ ಬೂದಿಯಿಂದ ಪಡೆಯಲಾಗುತ್ತಿತ್ತು.

ತ್ವಚೆಯ ರಕ್ಷಣೆಗೆ ಹಾಗೂ ಸ್ವಚ್ಛತೆಗೆ ಸಾಬೂನಿನಂಥ ವಸ್ತುವನ್ನು ಬಳಸುವುದರ ಉಲ್ಲೇಖ ವೇದ, ಪುರಾಣಗಳಲ್ಲಿಯೂ ಇದೆ. ಆಗ ಸ್ತ್ರೀಯರು ಹಾಲು, ಕೆನೆ, ಮೊಸರು, ಮಣ್ಣು, ಮಜ್ಜಿಗೆ, ಜೇನುತುಪ್ಪ, ಬಗೆಬಗೆಯ ಹಣ್ಣಿನ ರಸಗಳು ಮೊದಲಾದುವನ್ನು ಮಾರ್ಜಕಗಳನ್ನಾಗಿ ಬಳಸುತ್ತಿದ್ದರು. ಅದನ್ನೇ ನಂತರದ ಶತಮಾನಗಳ ಅರಸರ ಆಳ್ವಿಕೆಯಲ್ಲಿ ರಾಣಿಯರು ಬಳಸುತ್ತಿದ್ದುದು ಇತಿಹಾಸದಲ್ಲಿ ದಾಖಲಾಗಿದೆ. ಈಗಂತೂ ಇವುಗಳನ್ನೆಲ್ಲ ಬಳಸಲಾಗಿದೆ ಎಂಬ ಸುಳ್ಳು ಪ್ರಚಾರದ ಮೂಲಕ ಮಾರುಕಟ್ಟೆಯಲ್ಲಿ ಬಂದು ಬೀಳುತ್ತಿರುವ ಸಾಬೂನುಗಳಿಗೆ ಲೆಕ್ಕವಿಲ್ಲ.

ಬಹುಶಃ 80ರ ದಶಕದ ಆರಂಭದಲ್ಲಿ ಲಕ್ಸ್ ಸಾಬೂನು ಸಣ್ಣ ಪಟ್ಟಣಗಳಿಗೆ ಬಂದಿತು. ಅಲ್ಲಿಯವರೆಗೆ ಮನೆ ಮಂದಿಯೆಲ್ಲ ಸ್ನಾನಕ್ಕೆ ಕೆಂಪು ಬಣ್ಣದ ಒಂದೇ ಸಾಬೂನನ್ನು ಬಳಸುತ್ತಿದ್ದರು. ಅದು ಮೈಗೂ ಸೈ. ತಲೆ ಸ್ನಾನಕ್ಕೂ ಸೈ! ಆಗ ಸಣ್ಣ ಪಟ್ಟಣಗಳಲ್ಲಿ ದೊರೆಯುತ್ತಿದ್ದುದು ಕೇವಲ ಒಂದೆರಡು ಹೆಸರಿನ ಸಾಬೂನುಗಳು. ಅದೇ ಸಮಯಕ್ಕೆ ಸರಿಯಾಗಿ ಭಾರತದಲ್ಲಿ ಬಣ್ಣದ ಟೀವಿ ಕಾಲಿಟ್ಟಿತು. ಅಲ್ಲಿಂದ ಸಾಬೂನುಗಳೆಲ್ಲ ‘ಸೋಪ್’ ಆಗಿ ಒಂದು ರೀತಿಯ ಶಿಷ್ಟತೆಯನ್ನೂ ಮೇಲರಿಮೆಯನ್ನು ಜನರಿಗೆ ಕಲಿಸಿದವು.

ಟೀವಿಯ ಮೂಲಕ ಏಕ ಕಾಲದಲ್ಲಿ ಲಕ್ಷಾಂತರ ಜನರನ್ನು ತಲುಪಬಹುದಾದ ಸವಲತ್ತು ಅನೇಕ ಉದ್ದಿಮೆಗಳಿಗೆ ಚುರುಕು ತಂದಿತು. ಅವುಗಳಲ್ಲಿ ಸಾಬೂನು ಉದ್ಯಮವೂ ಒಂದು. ಅದರ ಮೊದಲ ಪರಿಣಾಮವಾಗಿ ಸ್ವಚ್ಛತೆಗಾಗಿ ಇದ್ದ ಸಾಬೂನು ಸೌಂದರ್ಯವರ್ಧಕವಾಯಿತು. ಮುಂದಿನ ಅರ್ಧ ದಶಕದಲ್ಲಿ ಅದು ವಿಸ್ತರಿಸಿಕೊಂಡ ವ್ಯಾಪ್ತಿ ಅಗಾಧ. ಮೊದಲು ಶಿಶುಗಳಿಗೆ ವಿಶೇಷವಾಗಿ ಸಿದ್ಧಗೊಂಡ ಸಾಬೂನು, ನಂತರದ ವರ್ಷಗಳಲ್ಲಿ ಪುರುಷರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಎಂಬ ಮುಖ್ಯ ವಿಭಾಗಗಳ ಅಡಿಯಲ್ಲಿ ಸಾಮಾನ್ಯ, ಗ್ಲಿಸರಿನ್, ಸ್ಯಾಂಡಲ್, ಔಷಧೀಯ, ವಿವಿಧ ಸುಗಂಧಗಳ, ವಿವಿಧ ಗಿಡಮೂಲಿಕೆಗಳ, ಮುಂತಾಗಿ ಆಕರ್ಷಕ ಪ್ಯಾಕಿಂಗ್, ಬಣ್ಣಗಳಿಂದ ಜನಮನ ಸೂರೆಮಾಡಿತು. ಸಿನಿಮಾ ತಾರೆಯರು ಬಾತ್ ಟಬ್ಬಿನಿಂದ ಹೊರ ಬರುವಾಗ ಸುಂದರವಾಗಿ ಕಾಣಲು ಸಾಬೂನೇ ಕಾರಣ ಎಂಬುದನ್ನು ಜನ ತಮ್ಮ ಪಡಸಾಲೆಗಳಲ್ಲಿನ ಟೀವಿಗಳಲ್ಲಿ ಬಿಟ್ಟ ಕಣ್ಣು ಬಿಟ್ಟಂತೇ ನೋಡಿ ಮರುಳಾದರು.

ಕಳೆದ ಒಂದೆರಡು ದಶಕದಿಂದ ಜನರಲ್ಲಿ ಹೆಚ್ಚುತ್ತಿರುವ ಆರೋಗ್ಯದ ಅರಿವಿನ ನಂತರ ಸಾಬೂನು ಮಾರುಕಟ್ಟೆ ಇನ್ನೂ ವಿಸ್ತೃತವಾಗಿದೆ. ಈಗ ಬಾರ್, ಜೆಲ್, ದ್ರವ – ಈ ಮೂರು ಬಗೆಗಳಲ್ಲಿ ಸಹಸ್ರಾರು ಸಾಬೂನುಗಳನ್ನು ಸ್ನಾನಕ್ಕೆ ಬಳಸುವುದರ ಜೊತೆಗೆ ಬಟ್ಟೆ, ಪಾತ್ರೆಗಳ ಸ್ವಚ್ಛತೆಗೂ ಬಳಸಲಾಗುತ್ತಿದೆ.

ಭಾರತವನ್ನು ಇಂದಿಗೂ ಹಳ್ಳಿಗಳ ರಾಷ್ಟ್ರ ಎಂದು ಕರೆಯಲಾಗುತ್ತದೆ. ಅಚ್ಚರಿಯ ವಿಷಯವೆಂದರೆ, ಭಾರತದ ಸಾಬೂನಿನ ಗ್ರಾಹಕರಲ್ಲಿ ಶೇ. 70ರಷ್ಟು ಗ್ರಾಮೀಣ ಗ್ರಾಹಕರು! ಇದರಿಂದಲೇ ಸಾಬೂನು